# ನ. 15: ವೃಕ್ಷಲಕ್ಷ ಪ್ರಶಸ್ತಿ ಪ್ರದಾನ



ಶಿರಸಿ: ಕೆರೆ ಸಮ್ಮೇಳನ ಸಮಾರೋಪ ಸಮಾರಂಭದಲ್ಲಿ ನವೆಂಬರ 15 ರಂದು ಭೈರುಂಬೆಯಲ್ಲಿ ವೃಕ್ಷಲಕ್ಷ್ಯ ಪ್ರಶಸ್ತಿ ನೀಡಲಾಗುತ್ತಿದ್ದು, . ಬೆಂಗಳೂರು ಸಮೀಪದ ಆನೇಕಲ್ ತಾಲೂಕಿನ ಶಿವೇನಹಳ್ಳಿಯ ಸ್ವಾಮಿ ವಿಷ್ಣುಮಯಾನಂದ ಅವರನ್ನು ಆಯ್ಕೆ ಮಾಡಲಾಗಿದೆ.

ರಾಮಕೃಷ್ಣ ಮಿಶನ್ ಸ್ವಾಮೀಜಿಯವರಾಗಿದ ವಿಷ್ಣುಮಯಾನಂದ ಅವರು ಕಳೆದ 25 ವರ್ಷಗಳಿಂದ ಕಲ್ಲುಗುಡ್ಡ, ಬರಡು ಭೂಮಿಯಲ್ಲಿ 300 ಎಕರೆ ಕಾಡು ಬೆಳೆಸಿದ್ದಾರೆ. ಪಶ್ಚಿಮಘಟ್ಟದ ಗಿಡಮೂಲಿಕೆಗಳು ಬಿದಿರು, ಶ್ರೀಗಂಧ, ಬೀಟೆ, ಮತ್ತಿ, ಹೊನ್ನೆಗಳ ವನ ಬೆಳೆಸಿದ್ದಾರೆ. 'ನೀರೇ ಇಲ್ಲದ ಬರಗಾಲದ ನಾಡಲ್ಲಿ ಹಳ್ಳ, ಕೆರೆಗಳನ್ನು ನಿರ್ಮಿಸಿದ್ದಾರೆ. ವನ್ಯಜೀವಿ, ಜಾನುವಾರು, ಹಳ್ಳಿಗಳ ಭೂಮಿ ನೀರುಣಿಸಿದ್ದಾರೆ. ಅನಾಥಮಕ್ಕಳ ಶಾಲೆ, ಗೋಶಾಲೆ, ನಡೆಸುತ್ತಿದ್ದಾರೆ. ಮಾತು ಕಡಿಮೆ, ಸೇವೆ ಭೂತಾಯಿ ಪೂಜೆಗೆ ಸದಾ ಗಮನ ನೀಡಿದ್ದಾರೆ.

74 ವರ್ಷದ ಪೂಜ್ಯ ವಿಷ್ಣುಮಯಾನಂದರು ಶಿರಸಿಗೆ ಆಗಮಿಸಿ ವೃಕ್ಷಲಕ್ಷ್ಯ ಪ್ರಶಸ್ತಿ ಸ್ವೀಕಾರ ಮಾಡುತ್ತಿರುವುದು ನಮ್ಮೆಲ್ಲರ ಸೌಭಾಗ್ಯ ಎಂದು ಕೆರೆ ಸಮ್ಮೇಳನದ ಸಂಚಾಲಕರಾದ ನಾರಾಯಣ ಗಡೀಕೈ ಹಾಗೂ ಗಣಪತಿ ಕೆ ಸಂತಸ ವ್ಯಕ್ತ ಮಾಡಿದ್ದಾರೆ.